## ಅಪೆಂಡಿಕ್ಸ್

ನಂಜ ಗಾಬರಿಯಿಂದ ಆಸ್ಪತ್ರೆ ಒಳಗೆ ಬಂದು, 'ಡಾಕ್ಟರ್ ಅರ್ಜೆಂಟ್ ಇದೆ, ನನ್ನ ಹೆಂಡತಿಗೆ ಅಪೆಂಡಿಕ್ಸ್ ಆಗಿರ್ಬೇಕು. ಹೊಟ್ಟೆ ನೋವು ಅಂತ ಕಿರುಚಾಡುತ್ತಿದ್ದಾಳೆ, ಬೇಗ ನೋಡಿ' ಎಂದ. 'ಸಾಧ್ಯವೇ ಇಲ್ಲ, ಕಳೆದ ವರ್ಷವೇ ನಿಮ್ಮ ಹೆಂಡತಿಗೆ ಅಪೆಂಡಿಕ್ಸ್ ಆಪರೇಷನ್ ಮಾಡಿದ್ದೇನೆ. ಎರಡೆರಡು ಅಪೆಂಡಿಕ್ಸ್ ಇರೋಲ್ಲ' ಎಂದರು ವೈದ್ಯ. 'ನೀವು ಹೇಳ್ತಿರೋದು ಸರಿ ಡಾಕ್ಟರೇ, ಎರಡೆರಡು ಅಪೆಂಡಿಕ್ಸ್ ಇರಲಿಕ್ಕಿಲ್ಲ... ಎರಡೆರಡು ಹೆಂಡತಿ ಇರಬಾರದಾ?' ಎಂದ ನಂಜ.

**ವಿ. ಹೇಮಂತ ಕುಮಾರ್**





ಕಲೆ: ಗಣೇಶ ಆಚಾರ್ಯ

## ಗಾಟ್ ರಮ್?

ಸೇನೆಯಲ್ಲಿ ಕೆಲಸ ಮಾಡಿ ನಿವೃತ್ತರಾದ ಅಧಿಕಾರಿಯೊಬ್ಬರು ದಕ್ಷಿಣ ಭಾರತೀಯ ದೇವಸ್ಥಾನಗಳಿಗೆ ಯಾತ್ರೆ ಬೆಳೆಸಿದ್ದರು. ದೇವಸ್ಥಾನವೊಂದರ ಮುಖ್ಯ ಪೂಜಾರಿ ಅವರ ಬಳಿ ಬಂದು ಮೆಲ್ಲನೆ, 'ಗಾಟ್ ರಮ್?(Got Rum?)' ಎಂದು ಕೇಳಿದರು. ಅಚ್ಚರಿಯಿಂದ ಆಫೀಸರ್ ಉತ್ತರಿಸಿದರು, 'ಇದೆ, ಆದರೆ ಹೊರಗಡೆ ನಿಲ್ಲಿಸಿರುವ ಕಾರಿನಲ್ಲಿದೆ. ಓಲ್ಡ್ ಮಂಕ್ ಮತ್ತು ಬಕಾರ್ಡಿಯ ಒಂದೊಂದು ಬಾಟಲಿಗಳನ್ನು ಇಟ್ಟಿದ್ದೇನೆ'. ಪೂಜಾರಿ ಸಿಟ್ಟಿಗೆದ್ದ. ತಕ್ಷಣ ಪರಿಸ್ಥಿತಿಯನ್ನರಿತ ಆಫೀಸರರ ಪತ್ನಿ ಮೆಲ್ಲನುಸುರಿದರು, 'ಪೂಜಾರಿಯವರು ನಿಮ್ಮ ಗೋತ್ರ (Gotram) ಕೇಳುತ್ತಿದ್ದಾರೆ. ನಿಮಗೆ ಶರಾಬಿನ ವಿನಃ ಬೇರೇನೂ ಕೇಳಿಸುವುದಿಲ್ಲ!'

**ರಮಣ್ ಶೆಟ್ಟಿ ರೆಂಜಾಳ್**